# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 856
ಮಾನ್ಯ ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 13.03.2025

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸತ್ಯಕ್ಕೆ ದೂರವಾದಂತಹ ಮತ್ತು ಸಾರ್ವಜನಿಕರನ್ನು ದಿಕ್ಕು ತಪ್ಪಿಸುವಂತಹ ಸುದ್ದಿಗಳನ್ನು ಪ್ರಚುರಪಡಿಸುವವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಮಗಳೇನು: ಈ ಸಮಸ್ಯೆಯನ್ನು ಪರಿಹರಿಸಲು ಪ್ರತಿ ಜಿಲ್ಲೆಯಲ್ಲಿ Special Fact-Check Units ರಚಿಸಿರುವುದು ನಿಜವೇ ; | ಸತ್ಯಕ್ಕೆ ದೂರವಾದಂತಹ ಮತ್ತು ಸಾರ್ವಜನಿಕರನ್ನು ದಿಕ್ಕು ತಪ್ಪಿಸುವಂತಹ ಸುದ್ದಿಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಇಲಾಖೆಯು ನಿಯಮಿತವಾಗಿ ಹಮ್ಮಿಕೊಳ್ಳುತ್ತಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ಸಹಯೋಗದಲ್ಲಿ ವಿಚಾರ ಸಂಕಿರಣ/ಮಾಧ್ಯಮ ಹಬ್ಬ ಹಮ್ಮಿಕೊಂಡು ಸುದ್ದಿಗಳ ಸತ್ಯತೆಯನ್ನು ಪರಿಶೀಲಿಸುವ ವಿಧಾನಗಳ ಬಗ್ಗೆ ಪತ್ರಕರ್ತರು / ಪತ್ರಿಕೋದ್ಯಮ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಲಾಗುತ್ತಿದೆ.<br><br>ಸಾರ್ವಜನಿಕರ ದಿಕ್ಕು ತಪ್ಪಿಸುವಂತಹ ಸುಳ್ಳು ಸುದ್ದಿಗಳನ್ನು ಪ್ರಚುರಪಡಿಸುವವರ ವಿರುದ್ಧ ಜಾಗೃತಿ ಮೂಡಿಸುವುದರ ಜೊತೆಗೆ, ಸಂಬಂಧಿಸಿದ ಇಲಾಖೆಗಳಿಂದ ನಿಖರ ಮಾಹಿತಿ ಪಡೆದು ಸ್ಪಷ್ಟೀಕರಣಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲಿ Special Fact-Check Unitsಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ರಚಿಸಲಾಗಿರುವುದಿಲ್ಲ. |
| ಆ) | ಇದ್ದಲ್ಲಿ, ಎಲ್ಲಾ ಜಿಲ್ಲೆಗಳಲ್ಲಿ ಈ Special Fact-Check Units ಗಳನ್ನು ರಚಿಸಲಾಗಿದೆಯೇ ಮತ್ತು ಈ Unitsಗಳ ಜವಾಬ್ದಾರಿಗಳೇನು; | Special Fact-Check Unitsಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರಚಿಸಿರುವುದಿಲ್ಲವಾದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ) | ರಾಜ್ಯದಲ್ಲಿ 2018-2019 ರಿಂದ 2022-2023ನೇ ಸಾಲಿನವರೆಗೆ ಸರ್ಕಾರದ ವತಿಯಿಂದ ಜಾಹೀರಾತುಗಳಿಗಾಗಿ ವರ್ಷವಾರು ಖರ್ಚು ಮಾಡಲಾದ ಒಟ್ಟು ಮೊತ್ತದ ಬಾಬ್ತು ಎಷ್ಟು ಮತ್ತು ಚುನಾವಣೆ ಸಮಯದಲ್ಲಿ ಜಾಹೀರಾತುಗಳಿಗಾಗಿ ಖರ್ಚು ಮಾಡಲಾದ ಒಟ್ಟು ಮೊತ್ತವೆಷ್ಟು? | 2018-19 ರಿಂದ 2022-23ನೇ ಸಾಲಿನವರೆಗೆ ಸರ್ಕಾರದ ಜಾಹೀರಾತುಗಳಿಗಾಗಿ ಸರ್ಕಾರದಿಂದ ಬಿಡುಗಡೆ ಮಾಡಲಾದ ವೆಚ್ಚ ಈ ಕೆಳಕಂಡಂತಿದೆ:-<br><br>ಕ್ರ.ಸಂ / ವರ್ಷ / ವೆಚ್ಚ (ರೂ.ಗಳಲ್ಲಿ)<br>1 / 2018-19 / 37.00 ಕೋಟಿ<br>2 / 2019-20 / 36.00 ಕೋಟಿ<br>3 / 2020-21 / 111.15 ಕೋಟಿ<br>4 / 2021-22 / 86.08 ಕೋಟಿ<br>5 / 2022-23 / 134.35 ಕೋಟಿ<br><br>ಚುನಾವಣೆ ನಡೆದ ವರ್ಷವಾದ 2022-23ನೇ ಸಾಲಿನಲ್ಲಿ ಒಟ್ಟು ರೂ.134.35ಕೋಟಿ ವೆಚ್ಚದ ಜಾಹೀರಾತುಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ. |

**ಸಂ: ಕೆಸಿಐ-ಪಿಐಪಿ/75/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ